15 ಮಂಗಳೂರು 16 ಗುಲ್ಬರ್ಗ–1

17 ಬೆಳಗಾಂ 18 ಬೀದರ್

19 ದೇವರಾಯನದುರ್ಗ 20 ಧಾರವಾಡ

21 ಶಿಂಷಾ 22 ಹಾಸನ

23 ಗುಲ್ಬರ್ಗಾ–2 24 ಮಲ್ಲೇಕಾಮನಹಳ್ಳಿ

ಉಳಿದ 16 ಹೋಟೆಲ್ ಸೌಲಭ್ಯಗಳನ್ನು ನಿಗಮದಿಂದಲೇ ನಡೆಸಲಾಗುತ್ತಿದೆ

ಪ್ರಶ್ನೆ ಸಂಖ್ಯೆ 90 (61) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ಬೆಂಗಳೂರು ನಗರದಲ್ಲಿ ಎಷ್ಟು ಆಪಾರ್ಟ್‌ಮೆಂಟ್‌ಗಳಿವೆ,

ಆ) ಬೆಂಗಳೂರು ನಗದಲ್ಲಿ ಇರುವ ಮೇಲು ಸೇತುವೆ ರಸ್ತೆಗಳೆಷ್ಟು ಹಾಗೂ ಮುಂದೆ ನಿರ್ಮಿಸಲಿರುವ ಮೇಲು ಸೇತುವೆ ಸಂಖ್ಯೆಗಳೆಷ್ಟು,

ಇ) ಬೆಂಗಳೂರಿನ ಜನಸಂಖ್ಯೆಗೆ ಆಧಾರವಾಗಿ ಬೆಂಗಳೂರಿನಲ್ಲಿ ಎಷ್ಟು ಹೊಸ ಬಡಾವಣೆಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನಿರ್ಮಾಣ ಮಾಡಲಿದೆ,

ಈ) ಇದುವರೆವಿಗೆ ಎಷ್ಟು ಒತ್ತುವರಿ ಜಮೀನನ್ನು ವಶಪಡಿಸಿಕೊಳ್ಳಲಾಗಿದೆ, ಈ ಒತ್ತುವರಿ ಜಮೀನನ್ನು ಯಾವ ರೀತಿ ಉಪಯೋಗಿಸಲಾಗುವುದು,

ಉ) ಬೆಂಗಳೂರು ಸಮಗ್ರ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಇಲ್ಲಿಯವರೆಗೆ ಒಟ್ಟು 759 ಅಪಾರ್ಟ್‌ಮೆಂಟ್ ಕಟ್ಟಡಗಳ ನಕ್ಷೆಗಳಿಗೆ ಅನುಮೋದನೆ ನೀಡಲಾಗಿರುತ್ತದೆ

ಆ) ಬೆಂಗಳೂರು ನಗರದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಒಟ್ಟು 8(ಎಂಟು) ಮೇಲುಸೇತುವೆ ರಸ್ತೆಗಳನ್ನು ನಿರ್ಮಿಸಲಾಗಿರುತ್ತದೆ ಹಾಗೂ 3(ಮೂರು) ಮೇಲುಸೇತುವೆ ರಸ್ತೆಗಳನ್ನು ನಿರ್ಮಿಸಲು ಉದ್ದೇಶಿಸಿದೆ

ಇ) ಬೆಂಗಳೂರು ನಗರದ ಪೂರ್ವ ಮತ್ತು ಪಶ್ಚಿಮ ಭಾಗದಲ್ಲಿ ಎರಡು ಬೃಹತ್ ವಸತಿ ಬಡಾವಣೆಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ

ಈ) ಪ್ರಾಧಿಕಾರವು ಇದುವರೆವಿಗೆ 250 ಎಕರೆ 19 ಗುಂಟೆ ಒತ್ತುವರಿ ಜಮೀನನ್ನು ವಶಪಡಿಸಿಕೊಳ್ಳಲಾಗಿದೆ ಈ ಒತ್ತುವರಿ ಜಮೀನನ್ನು ಆಯಾ ಬಡಾವಣೆಗಳಲ್ಲಿ ನಿವೇಶನಗಳನ್ನಾಗಿ ರಚಿಸಿ ಸೇರ್ಪಡಿಸಲಾಗಿದೆ

ಉ) ಬೆಂಗಳೂರು ನಗರಕ್ಕೆ ಪರಿಷ್ಕೃತ ಮಾಸ್ಟರ್ ಪ್ಲಾನ್ 2015 ಅನ್ನು ದಿನಾಂಕ 25-06-2007 ರಂದು ಅನುಮೋದಿಸಲಾಗಿದ್ದು, ಇದರಲ್ಲಿ ಬೆಂಗಳೂರು ಸಮಗ್ರ ಅಭಿವೃದ್ಧಿಗೆ ಯೋಜನೆಗಳನ್ನು ರೂಪಿಸಲಾಗಿದೆ

****